ತಿಂಗಳುಗಳಿಂದ ಕೊಡದೆಯಿರುವುದರಿಂದ ಬಡವರಾದ ಹಾಲು ಉತ್ಪಾದಕ ರೈತರಿಗೆ ಹಣಕಾಸಿನ ತೊಂದರೆಯುಂಟಾಗಿದ್ದು ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಕರ್ನಾಟಕ ಮಿಲ್ಕ್ ಫೆಡರೇಷನ್‌ದವರು ಕೂಡಲೇ ಬಾಕಿ ಹಣವನ್ನು ಬಿಡುಗಡೆ ಮಾಡಲು ಜರೂರು ಆದೇಶ ಕೊಡಬೇಕೆಂದು ಸರಕಾರದ ಸಂಬಂಧಿಸಿದ ಮಂತ್ರಿಗಳ ಹಾಗೂ ಮಾನ್ಯ ಅಧ್ಯಕ್ಷರ ಗಮನಕ್ಕೆ ತರುತ್ತೇನೆ.

2. ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆ ಪೂರ್ಣಗೊಳ್ಳದಿರುವುದು.

ಶ್ರೀ ಚಂದ್ರಕಾಂತ ಜಿ. ಬಲ್ಲದ್ (ಧಾರವಾಡ):– ಮಾನ್ಯ ಅಧ್ಯಕ್ಷರೆ, ಧಾರವಾಡ–ಹುಬ್ಬಳ್ಳಿ ನಡುವೆ ರಾಷ್ಟ್ರೀಯ ಹೆದ್ದಾರಿ ನಂಬರ್ – 4 ಇದು ಸಂಪೂರ್ಣವಾಗಿ ಹಾಳಾಗಿದ್ದು ಸಾರ್ವಜನಿಕ ವಾಹನಗಳು ಹಾಗೂ ಯಾವುದೇ ಖಾಸಗೀ ವಾಹನಗಳು ಸರಿಯಾಗಿ ಹಾಗೂ ಸುರಕ್ಷಿತವಾಗಿ ಅಡ್ಡಾಡಲಿಕ್ಕೆ ಬಾರದೆ ಪ್ರಯಾಣಿಕರಿಗೂ ಹಾಗೂ ವಾಹನಗಳಿಗೂ ಅತೀವ ತೊಂದರೆ ಆನಾನುಕೂಲವಾಗಿದ್ದು ಈ ದುಸ್ಥಿತಿಗೆ ಸರಕಾರಿ ಅಧಿಕಾರಿಗಳ ಹಗೆ ಹಾಗೂ ಬೇಜವಾಬ್ದಾರಿ ಕೃತಿಯೇ ಆಗಿದೆ. ಈ ರಾಷ್ಟ್ರೀಯ ಬೈಪಾಸ್ ರಸ್ತೆ ಕೂಡ ಪೂರ್ಣಗೊಳ್ಳದೆ ಅನೇಕ ವರ್ಷಗಳಿಂದ ಅಂದರೆ ಕಳೆದ ಹತ್ತು ವರ್ಷಗಳಿಂದ ಇರುವುದರಿಂದ ಹಾಗೆಯೇ ಪ್ರಯಾಣಿಕರಿಗೆ ಅನಾನುಕೂಲವಾಗಿದೆ. ಈ ಎರಡು ವಿಚಾರಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಶಿವನಾಂದ ಹೆಚ್. ಕೌಜಲಾಗಿ (ಲೋಕೋಪಯೋಗಿ ಸಚಿವರು):– ಸರಕಾರದ ಗಮನಕ್ಕೆ ಮಾನ್ಯ ಸದಸ್ಯರು ತಂದಿದ್ದಾರೆ. ಅದನ್ನು ಪರಿಹರಿಸಲಾಗುವುದು.

3. Plugging and leakages at the silt gates of Basavasagar Dam.

SRI RAJA VENKATAPPA NAIK (Shorapur): Hon'ble Speaker, for the year 1994–95 the storage of the water in the Basavasagar Dam (UKP) for the kharif crop was satisfactorily full. In the month of November the water from the dam was dischared into the river unnecessarily just to favour the contractors to undertake the repair works for which the estimates were ready to the tune of Rs. 1.5 crores and also there are leakages in the five silt gates.

Sir, I bring to your knowledge that already the farmers under this dam have completed sowing groundnut, roughly estimated to cost nearly 4 to 5 crores of rupees. By the water level records, I fear that the water in the dam at present is not sufficient for the standing kharif crops. Farmers need water for sixty more days, but the water in the dam at present can give only for twenty days. I would like to know, unnecessarily why the silt gates were lifted; what measures the government has taken to stop the leakages in the silt gates, how the government is going to compensate the farmers who have incurred losses; what action will be taken against the guilty officers? A enquiry committee should be formed and justice should be given to the farmers.

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯ ಮಂತ್ರಿಯವರು):– ಮಾನ್ಯ ಅಧ್ಯಕ್ಷರೆ, ಈ ವಿಧಿಸಿಯಮ 334ರ ಕೆಳಗಡೆ ಬಂದಿರುವಂಥ ವಿಷಯವನ್ನು ಸರ್ಕಾರ ಗಮನಿಸುತ್ತದೆ.

ಅಧ್ಯಕ್ಷರು:– ಮಾನ್ಯ ಬಣಕಾರ್‌ರವರು ಪ್ರಸ್ತಾಪ ಮಾಡಿದ ವಿಷಯಕ್ಕೆ ಈ ಕಡೆ ಸಂಬಂಧಪಟ್ಟ ಸಚಿವರು ಇಲ್ಲ. ಯಾರಾದರೂ ಸರ್ಕಾರದ ಪರವಾಗಿ ಒಬ್ಬರು ಅದನ್ನು ಗಮನಕ್ಕೆ ತೆಗೆದುಕೊಳ್ಳಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು):– ಮಾನ್ಯ ಅಧ್ಯಕ್ಷರೇ, ಸರ್ಕಾರದ ಪರವಾಗಿ ಅದನ್ನು ಗಮನಿಸುತ್ತೇವೆ.

ಶ್ರೀ ಯು.ಬಿ. ಬಣಕಾರ್:– ಮಾನ್ಯ ಅಧ್ಯಕ್ಷರೇ, ತೀವ್ರವಾಗಿ ಅದಕ್ಕೆ ಹಣ ಪೂರೈಕೆಯಾಗುವಂತೆ ಅದೇ ಆದೇಶವನ್ನು ಕೊಡಬೇಕು.

ಗಮನ ಸೆಳೆಯುವ ಸೂಚನೆಗಳು

ವಿಷಯ:– ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಪರಿಸ್ಥಿತಿ.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ):– ಮಾನ್ಯ ಸಭಾಧ್ಯಕ್ಷರೇ, ಬೆಂಗಳೂರು ನಗರದ ಜನತೆ ಎದುರಿಸುತ್ತಿರುವ ಕುಡಿಯುವ ನೀರಿನ ತೀವ್ರ ಅಭಾವ ಪರಿಸ್ಥಿತಿ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):– ಮಾನ್ಯ ಸಭಾಧ್ಯಕ್ಷರೇ,

ಶ್ರೀ ವಾಟಾಳ್ ನಾಗರಾಜ್:– ಈ ಸದನದಲ್ಲಿ ನಡೆಯುವುದು ಮಂತ್ರಿಗಳಾದವರು ಉತ್ತರವನ್ನು ಕನ್ನಡದಲ್ಲಿ ಕೊಡತಕ್ಕಂಥದ್ದು. ತಾವು ಚೆನ್ನಾಗಿ ಕನ್ನಡದಲ್ಲಿ ಮಾತನಾಡುತ್ತೀರಿ. ಏತಕ್ಕೆ ಹೀಗೆ ಮಾಡುತ್ತಿದ್ದೀರಿ ? ದಾರಿ ತಪ್ಪುತ್ತಿದ್ದೀರಿ.

ಅಧ್ಯಕ್ಷರು:– ಸ್ವಲ್ಪ ಕಮಾರುಲ್ ಇಸ್ಲಾಂರವರ ಜೊತೆಗೆ ಅವರಿಗೂ ರಿಯಾಯಿತಿ ಕೊಡಿ.

ಶ್ರೀ ವಾಟಾಳ್ ನಾಗರಾಜ್:– ಇವರಿಗೆ ಪಕ್ಕಾ ಕನ್ನಡ ಬರುತ್ತದೆ. ನಾನು ನೋಡಿದ್ದೇನೆ. ಬಹಳ ಸಾರಿ ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. ಓಡಾಡಿದ್ದಾರೆ. ಅವರಿಗೆ ಗೊತ್ತಿದೆ.

ಅಧ್ಯಕ್ಷರು:-- ಇವತ್ತಿಗೆ ಬಿಟ್ಟುಬಿಡೋಣ.

ಶ್ರೀ ವಾಟಾಳ್ ನಾಗರಾಜ್:– ಬಹಳ ನೋವಿನಿಂದ.

ಅಧ್ಯಕ್ಷರು:– ಇವತ್ತಿಗೆ ಬಿಟ್ಟುಬಿಡೋಣ.

ಶ್ರೀ ಆರ್. ರೋಷನ್ ಬೇಗ್:– ಪ್ರಸ್ತುತದಲ್ಲಿ ಬೆಂಗಳೂರು ನಗರವು ಕಾವೇರಿ, ಅರ್ಕಾವತಿ ಮತ್ತು ಹೆಸರಘಟ್ಟದಲ್ಲಿ ಸ್ಥಾಪಿಸಿರುವ ಮೂರು ಮೂಲಸ್ಥಾನಗಳಿಂದ ಈ ಕೆಳಗೆ ಕಾಣಿಸಿರುವಂತೆ ಒಟ್ಟು 124 ಎಂ.ಜಿ.ಡಿ. ನೀರನ್ನು ಪಡೆಯುತ್ತಿದೆ.

1. ಕಾವೇರಿ 98 ಎಂ.ಜಿ.ಡಿ.
2. ಅರ್ಕಾವತಿ (ಸಿ. ಆರ್. ಎಸ್. ರಿಸೆರ್‌ವಾಯರ್) 24 ಎಂ.ಜಿ.ಡಿ.
3. ಹೆಸರಘಟ್ಟ 2 ಎಂ.ಜಿ.ಡಿ.

ಈ ಮೇಲಿನ ಪ್ರಮಾಣವು ಬೆಂಗಳೂರಂತಹ ನಗರಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ನಿಗದಿಪಡಿಸಿದ ಅಳತೆ